# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು

ಸಂಖ್ಯೆ : ಕರಾಸಾ/ಕೇಕ/ನೇಮಕ/ಸಿ2/954 /19-20 ದಿನಾಂಕ31 .12.2019

## ತಿದ್ದುಪಡಿ ಜಾಹೀರಾತು

ವಿಷಯ: ದಿನಾಂಕ: 12-6-2018 ರಂದು 200 ಭದ್ರತಾ ರಕ್ಷಕ ಹುದ್ದೆಗಳ ನೇರ ನೇಮಕಾತಿಗಾಗಿ ಹೊರಡಿಸಲಾದ ಜಾಹೀರಾತು ಸಂ.2/2018 ರಲ್ಲಿನ ಆಯ್ಕೆ ವಿಧಾನದ ತಿದ್ದುಪಡಿ ಬಗ್ಗೆ.

ಉಲ್ಲೇಖ: ಜಾಹೀರಾತು ಸಂ.2/2018 ದಿನಾಂಕ:12-6-2018

******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಜಾಹೀರಾತಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಅವಶ್ಯಕವಿರುವ ವಿಭಾಗ ಮಟ್ಟದ ಮೇಲ್ವಿಚಾರಕೇತರ ಹುದ್ದೆಯಾದ "ಭದ್ರತಾ ರಕ್ಷಕ" ದರ್ಜೆ-3ರ ಹುದ್ದೆಗಳನ್ನು ಸಂಸ್ಥೆಯ (ಪದವೃಂದ ಮತ್ತು ನೇಮಕ) ನಿಯಮಾವಳಿಗಳು 1982 ಮತ್ತು ತದನಂತರದ ತಿದ್ದುಪಡಿ ಆದೇಶಗಳ ಅನುಸಾರ ನೇರ ನೇಮಕಾತಿ ಮೂಲಕ ತುಂಬಲು ಅರ್ಹ ಅಭ್ಯರ್ಥಿಗಳಿಂದ ಆನ್ ಲೈನ್ **(ON LINE)** ಮುಖಾಂತರ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು. ಸದರಿ ಜಾಹೀರಾತಿನಲ್ಲಿ ಕ್ರಮ ಸಂಖ್ಯೆ V ರಲ್ಲಿ ಅಭ್ಯರ್ಥಿಗಳ ಆಯ್ಕೆ ಕುರಿತಂತೆ ನಡೆಸುವ ಆಯ್ಕೆ ವಿಧಾನಗಳನ್ನು ತಿಳಿಸಲಾಗಿರುತ್ತದೆ. ಆದರೆ ಆಡಳಿತಾತ್ಮಕ ಕಾರಣಗಳ ಮೇರೆಗೆ ಆಯ್ಕೆ ನಡೆಸುವ ವಿಧಾನದಲ್ಲಿ ಈ ಕೆಳಕಂಡಂತೆ ಮಾರ್ಪಾಡು ಮಾಡಲಾಗಿದೆ.

**ಆಯ್ಕೆ ವಿಧಾನದ ಕ್ರಮ ಸಂಖ್ಯೆ V ರಲ್ಲಿ ಈ ಕೆಳಕಂಡಂತೆ ಬದಲಾವಣೆ ಮಾಡಲಾಗಿರುತ್ತದೆ.**

**ಎ) ಮೊದಲನೆ ಹಂತ:- ಸಾಮಾನ್ಯ ಸಾಮರ್ಥ್ಯ ಪರೀಕ್ಷೆ.**
**ಬಿ) ಎರಡನೆ ಹಂತ:- ದೇಹದಾರ್ಢ್ಯತೆ ಪರಿಶೀಲನೆ ಹಾಗೂ ದೈಹಿಕ ಸಾಮರ್ಥ್ಯ ಪರೀಕ್ಷೆ**

ಉಳಿದಂತೆ ಉಲ್ಲೇಖಿತ ಜಾಹೀರಾತಿನಲ್ಲಿ ತಿಳಿಸಿರುವ ಮಾಹಿತಿಯಲ್ಲಿ ಇನ್ನಾವುದೇ ಬದಲಾವಣೆ ಇರುವುದಿಲ್ಲ.

ನಿರ್ದೇಶಕರು (ಸಿಬ್ಬಂದಿ:ಪರಿಸರ)

ಪ್ರತಿಯನ್ನು:

1. ಉಪ ನಿರ್ದೇಶಕರು (ಕೇಂದ್ರಸ್ಥಾನ), ಸಮಾಜ ಕಲ್ಯಾಣ ಇಲಾಖೆ, ಡಾ/ಅಂಬೇಡ್ಕರ್ ಭವನ ವಸಂತನಗರ, ಬೆಂಗಳೂರು ರವರ ಮಾಹಿತಿಗಾಗಿ.
2. ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ (ಎನ್‌ಫೋರ್ಸ್‌ಮೆಂಟ್ ಸೆಲ್) 4ನೇ ಮಹಡಿ, ಬಹುಮಹಡಿ ಕಟ್ಟಡ ಬೆಂಗಳೂರು-1 ರವರ ಮಾಹಿತಿಗಾಗಿ.
3. ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ವಿನಿಮಯ ಕೇಂದ್ರ, ಸುಬ್ಬಯ್ಯ ರಸ್ತೆ ಬೆಂಗಳೂರು
4. ನಿರ್ದೇಶಕರು, ವೃತ್ತಿ ಮತ್ತು ಉದ್ಯೋಗ ತರಬೇತಿ 9/1, ಶ್ರೀ. ಪ್ರಕಾಶ ಕಾಂಪ್ಲೆಕ್ಸ್ ಪಿ. ಕಾಳಿಂಗ್‌ರಾವ್ ರಸ್ತೆ ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ, ವಿಧಾನಸೌಧ ಬೆಂಗಳೂರು ರವರ ಮಾಹಿತಿಗಾಗಿ.